# G.O.No. RDP 264 EGS 2013 Bangalore,Dated: 06-02-2014ರ ಕನ್ನಡ ಅನುವಾದ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕೂಲಿ ವೇತನ ಪಾವತಿ ವಿಳಂಬವಾದಲ್ಲಿ ಪರಿಹಾರ ನೀಡುವ ಕುರಿತು.

**ಓದಲಾಗಿದೆ** :
1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005.
2. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿಗಳು 2013, 4ನೇ ಆವೃತ್ತಿ.
3. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ, ಅಧಿಸೂಚನೆ ದಿನಾಂಕ:03-01-2014 (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005ರ ಅನುಸೂಚಿ I ಮತ್ತು IIಕ್ಕೆ ತಿದ್ದುಪಡಿ).

**ಪ್ರಸ್ತಾವನೆ:**

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 (ಕಾಯ್ದೆ ಸಂಖ್ಯೆ: 42) ರನ್ವಯ, ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕ ಸದಸ್ಯರನ್ನು ಹೊಂದಿದ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ 100 ದಿನಗಳಿಗೆ ಮೀರದಂತೆ ಕೂಲಿ ಉದ್ಯೋಗವನ್ನು ಒದಗಿಸುವುದು ಕಡ್ಡಾಯವಾಗಿರುವುದರಿಂದಲೂ;
2. ಕಾಯ್ದೆಯ ಪ್ರಕರಣ 3ರ ಉಪ ಪ್ರಕರಣ(3)ರ ಪ್ರಕಾರ, ಕೂಲಿ ಕಾರ್ಮಿಕರಿಗೆ ಕೂಲಿ ವೇತನವನ್ನು ಪ್ರತಿ ವಾರ ಅಥವಾ ಯಾವುದೇ ಸಂದರ್ಭದಲ್ಲಿ, ಕೆಲಸ ಮಾಡಿದ ದಿನದಿಂದ 15 ದಿನಗಳಿಗಿಂತ ವಿಳಂಬವಾಗದಂತೆ ಪಾವತಿಸಬೇಕಾಗಿರುವುದರಿಂದಲೂ;
3. ಉಲ್ಲೇಖ (3)ರ ಅಧಿಸೂಚನೆಯ ಅನುಸೂಚಿ II (ಕಾಯ್ದೆಯ 29ನೇ ಕ್ಲಾಸ್) ರಲ್ಲಿ ಕಡ್ಡಾಯಗೊಳಿಸಿರುವ ಪ್ರಕಾರ, ಇ-ಎನ್.ಎಂ.ಆರ್. ಅಂತಿಮಗೊಳಿಸಿದ 15ನೇ ದಿನದೊಳಗೆ ಕೂಲಿ ವೇತನ ಪಾವತಿಸುವುದು, ಇಲ್ಲದಿದ್ದಲ್ಲಿ 15ನೇ ದಿನದ ನಂತರ ವಿಳಂಬವಾದ ಪ್ರತಿ ದಿನ ಕೂಲಿ ಕಾರ್ಮಿಕರಿಗೆ ಪಾವತಿಸಬೇಕಾದ ವೇತನದ ಶೇ.0.05ರಷ್ಟರ ಧರದಲ್ಲಿ ವಿಳಂಬ ಪರಿಹಾರ ಪಾವತಿಸಬೇಗಿರುವುದರಿಂದಲೂ;
4. ಉಲ್ಲೇಖ (3)ರ ಅಧಿಸೂಚನೆಯ ಅನುಸೂಚಿ II (ಕಾಯ್ದೆಯ 29ನೇ ಕ್ಲಾಸ್) ರಲ್ಲಿ ಕಡ್ಡಾಯಗೊಳಿಸಿರುವ ಪ್ರಕಾರ, ವಿಳಂಬ ಪಾವತಿಗೆ (15 ದಿನಗಳಿಗೆ ಮೀರಿದ) ಕಾರಣರಾದ ಅನುಷ್ಠಾನ ಇಲಾಖೆ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರರಾಗಿರುವುದರಿಂದಲೂ;
5. ಇ-ಎನ್.ಎಂ.ಆರ್. ಅಂತಿಮಗೊಳಿಸಿದ ದಿನದಿಂದ ಉದ್ಯೋಗ ಚೀಟಿದಾರರ (ಕೂಲಿಕಾರ್ಮಿಕ) ಖಾತೆಗೆ ವೇತನ ಪಾವತಿಯಾಗುವವರೆಗಿನ ಕಾರ್ಯಾನುಷ್ಠಾನ ಪ್ರಕ್ರಿಯೆ ಹಂತಗಳನ್ನು ಗುರುತಿಸಿ, ಪ್ರತಿ ಕಾರ್ಯಾನುಷ್ಠಾನ ಪ್ರಕ್ರಿಯೆ ಹಂತಕ್ಕೆ ಸಮಯ ಮಿತಿ ನಿಗಧಿಪಡಿಸಿ ಮತ್ತು ಪ್ರತಿಯೊಂದು ಕಾರ್ಯಾನುಷ್ಠಾನ ಪ್ರಕ್ರಿಯೆ ಹಂತಕ್ಕಾಗಿ ಸರ್ಕಾರಿ ನೌಕರ/ಸಿಬ್ಬಂದಿ/ಪ್ರಾಧಿಕಾರಕ್ಕೆ ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿರುವುದರಿಂದಲೂ;
6. ಇ-ಎನ್.ಎಂ.ಆರ್. ಅಂತಿಮಗೊಳಿಸಿದ 15 ದಿನಗಳೊಳಗೆ ಕೂಲಿ ವೇತನ ಪಾವತಿಗೆ ವಿಳಂಬವಾದಲ್ಲಿ, ಈ ವಿಳಂಬಕ್ಕೆ ಜವಾಬ್ದಾರರಾದ ವ್ಯಕ್ತಿಗಳು/ಪ್ರಾಧಿಕಾರವನ್ನು ಗುರುತಿಸುವುದು ಹಾಗೂ ಈ ಆದೇಶದನ್ವಯ ಉದ್ಯೋಗ ಚೀಟಿದಾರರಿಗೆ ಪರಿಹಾರ ಸಂದಾಯ ಮಾಡಿದ್ದನ್ನು ಅವನು/ಅವಳು ವಿಳಂಬಕ್ಕೆ ಕಾರಣರಾಗುವಷ್ಟು ದಿನಗಳ ಅನುಪಾತದಲ್ಲಿ ಅವರಿಂದ ಮರು ತುಂಬಲು ಹೊಣೆಗಾರರಾಗಿಸಬೇಕಾಗಿರುವುದರಿಂದಲೂ;
7. ಈ ಆದೇಶದ ಪ್ರಕಾರ ವಿಳಂಬ ಪರಿಹಾರ ಪಾವತಿಯನ್ನು ನಿಗಧಿಪಡಿಸಿದ ದಿನದಿಂದ 15 ದಿನಗಳೊಳಗೆ ಪಾವತಿಸುವುದು, ಇಲ್ಲದಿದ್ದಲ್ಲಿ ಇದು ಪಾವತಿಗೆ ಬಾಕಿಯಾಗುತ್ತದೆ. ಇದು ತನ್ನಿಂದತಾನೇ ಲೆಕ್ಕಹಾಕಿಕೊಳ್ಳುತ್ತದೆ ಮತ್ತು ವಿಳಂಬಕ್ಕೆ ಜವಾಬ್ದಾರರಾದವರಿಂದ ಇದನ್ನು ಮರು ಪಾವತಿ ಮಾಡಿಸಿಕೊಳ್ಳಬೇಕಾಗಿರುವುದರಿಂದಲೂ;
8. ಕರ್ನಾಟಕದಲ್ಲಿ ಈಗಾಗಲೇ ಕೂಲಿ ಮತ್ತು ಸಾಮಗ್ರಿ ಮೊತ್ತದ ಪಾವತಿಗಳನ್ನು ವಿದ್ಯುನ್ಮಾನದ ಮೂಲಕ ನೇರವಾಗಿ ಕೂಲಿಕಾರರ/ಉದ್ಯೋಗ ಚೀಟಿ ಹೊಂದಿದವರ ಖಾತೆಗಳಿಗೆ ಪಾವತಿಸುವ ಇ-ಎಫ್.ಎಂ.ಎಸ್. ತಂತ್ರಾಂಶ ಜಾರಿಯಲ್ಲಿದ್ದು, ಅದರನ್ವಯ ಯಾವಾಗ ಇ-ಎನ್.ಎಂ.ಆರ್.ಗಳು ಕೂಲಿ ಪಾವತಿಗೆ ಬಾಕಿಯಾಗುವವು ಹಾಗೂ ವಾಸ್ತವವಾಗಿ ಕೂಲಿಕಾರ್ಮಿಕರ ಖಾತೆಗಳಿಗೆ ಯಾವಾಗ ಕೂಲಿ ಜಮೆಯಾಗಿದೆ ಎಂಬುವ ವಿವರಗಳು ತಂತ್ರಾಂಶದಲ್ಲಿ ಲಭ್ಯವಿರುವುದರಿಂದಲೂ;

ಆದ್ದರಿಂದ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 264 ಉಖಾಯೋ 2013 ಬೆಂಗಳೂರು, ದಿನಾಂಕ: 06-02-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಇ-ಎನ್.ಎಂ.ಆರ್. ಅಂತಿಮಗೊಳಿಸಿದ ದಿನದ ನಂತರದ ಯೋಜನೆ ಅಡಿಯ ಕಾರ್ಯಾನುಷ್ಠಾನದ ವಿವಿಧ ಹಂತಗಳು, ವಿವಿಧ ಹಂತದ ಕರ್ತವ್ಯವನ್ನು ನಿರ್ವಹಿಸಬೇಕಾದ ಅಧಿಕಾರಿ/ಸಿಬ್ಬಂದಿಗಳು, ಪ್ರತಿ



Joint Director (Technical)

ಹಂತವನ್ನು ಅಂತಿಮಗೊಳಿಸಲು ನಿಗದಿ ಪಡಿಸಿದ ಕಾಲಾವಧಿ, ಮತ್ತು ಈ ಜವಾಬ್ದಾರಿಗಳನ್ನು ನಿಗದಿ ಪಡಿಸುವ ವಿಧಾನದ ವಿವರಗಳನ್ನು ಈ ಕೆಳಕಾಣಿಸಿದ ಅನುಬಂಧದಲ್ಲಿ ಸ್ಪಷ್ಟಪಡಿಸಿ, ಕೂಡಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಿದೆ.

| ಕ್ರ. ಸಂ. | ಕಾರ್ಯಾನುಷ್ಠಾನದ ವಿವಿಧ ಹಂತಗಳು | ಕಾರ್ಯಾನುಷ್ಠಾನದ ಪ್ರತಿ ಹಂತಕ್ಕೆ ಜವಾಬ್ದಾರಾದ ಅಧಿಕಾರಿ/ಸಿಬ್ಬಂದಿ/ಪ್ರಾಧಿಕಾರ | ಕಾರ್ಯಾನುಷ್ಠಾನದ ಪ್ರತಿ ಹಂತಕ್ಕೆ ನಿಗಧಿಪಡಿಸಿದ ಅವಧಿ | ಇ-ಎನ್.ಎಂ.ಆರ್. ಅಂತಿಮಗೊಳಿಸಿದ ದಿನಾಂಕದ ನಂತರ ಪ್ರತಿ ಹಂತಕ್ಕೆ ನಿಗಧಿಪಡಿಸಿದ ದಿನಗಳು | ಜವಾಬ್ದಾರಿಯನ್ನು ನಿಗಧಿ ಪಡಿಸುವ ವಿಧಾನ |
|---|---|---|---|---|---|
| 1 | ಇ-ಎನ್.ಎಂ.ಆರ್ ಅಂತಿಮಗೊಳಿಸುವುದು, ಕೆಲಸದ ಅಳತೆ ಮತ್ತು ಅಳತೆ ಪುಸ್ತಕದಲ್ಲಿ ದಾಖಲಿಸುವುದು | ಕಿರಿಯ ಅಭಿಯಂತರರು/ ಶಾಖಾಧಿಕಾರಿ/ ತಾಂತ್ರಿಕ ಸಹಾಯಕರು | ಮೂರು ದಿನಗಳು | ಮೂರನೇ ದಿನ | ಸಂಬಂಧಪಟ್ಟ ವ್ಯಕ್ತಿಯ ಕುರಿತು ನರೇಗ ಸಾಫ್ಟ್ ಮತ್ತು ಸಂಬಂಧಿತ ತಂತ್ರಾಂಶದಲ್ಲಿ ಅಳವಡಿಸಿದ ವಿವರಗಳನ್ವಯ |
| 2 | ಕೆಲಸದ ಅಳತೆ | ಕೆಲಸದ ಅಳತೆ ಮಾಡುವ ಪ್ರಾಧಿಕಾರ | ಒಂದು ದಿನ | ನಾಲ್ಕನೇ ದಿನ | -ಮೇಲಿನಂತೆ- |
| 3 | ಬಿಲ್ಲನ್ನು ತಯಾರಿಸಿ ಗ್ರಾಮ ಪಂಚಾಯಿತಿ/ಅನುಷ್ಠಾನ ಇಲಾಖೆಗೆ ಸಲ್ಲಿಸುವುದು | ಕಿರಿಯ ಅಭಿಯಂತರರು/ ಶಾಖಾಧಿಕಾರಿ/ ತಾಂತ್ರಿಕ ಸಹಾಯಕರು | ಒಂದು ದಿನ | ಐದನೇ ದಿನ | -ಮೇಲಿನಂತೆ- |
| 4 | ಕಾಮಗಾರಿ ಮತ್ತು ಬಿಲ್ಲಿನ ವಿವರಗಳನ್ನು ತಂತ್ರಾಂಶ/ಕಂಪ್ಯೂಟರ್‌ನಲ್ಲಿ ಆರೋಹಿಸುವುದು | ಗ್ರಾಮ ಪಂಚಾಯಿತಿಯ/ ಅನುಷ್ಠಾನ ಇಳಾಖೆಯ ಡಾಟಾ ಎಂಟ್ರಿ ಆಪರೇಟರ್ | ಎರಡು ದಿನಗಳು | ಆರು ಮತ್ತು ಏಳನೇ ದಿನ | -ಮೇಲಿನಂತೆ- |
| 5 | ಕೂಲಿ ಪಟ್ಟಿ ಸೃಜಿಸುವುದು ಮತ್ತು ಮೊದಲ ಸಹಿದಾರರಿಂದ ಎಫ್.ಟಿ.ಓ. ಸಹಿ ಮಾಡುವುದು | ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ/ ಮೊದಲ ಸಹಿದಾರರು | ಒಂದು ದಿನ | ಎಂಟನೇ ದಿನ | -ಮೇಲಿನಂತೆ- |
| 6 | ಎರಡನೇ ಸಹಿದಾರರಿಂದ ಎಫ್.ಟಿ.ಓ. ಸಹಿ ಮಾಡುವುದು | ಗ್ರಾಮ ಪಂಚಾಯಿತಿ ಅಧ್ಯಕ್ಷ/ಪ್ರಾಧಿಕಾರ/ಎರಡನೇ ಸಹಿದಾರರು | ಎರಡು ದಿನಗಳು | ಒಂಬತ್ತು ಮತ್ತು ಹತ್ತನೇ ದಿನ | -ಮೇಲಿನಂತೆ- |
| 7 | ಎನ್.ಐ.ಸಿ. ನವದೆಹಲಿ ರವರಿಂದ ಎಫ್.ಟಿ.ಓ. ಸಂಸ್ಕರಣೆ. | ಎನ್.ಐ.ಸಿ. ನವದೆಹಲಿ | ಒಂದು ದಿನ | ಹನ್ನೊಂದನೇ ದಿನ | -ಮೇಲಿನಂತೆ- |
| 8 | ಬ್ಯಾಂಕ್/ಅಂಚೆ ಕಛೇರಿ/ಹಣಕಾಸು ಸಂಸ್ಥೆ ವತಿಯಿಂದ ಎಫ್.ಟಿ.ಓ. ಸಂಸ್ಕರಿಸುವುದು ಮತ್ತು ಕೂಲಿ ಕಾರ್ಮಿಕರ ಖಾತೆಗೆ ಜಮೆ ಮಾಡುವುದು | ಎಸ್.ಬಿ.ಎಂ./ಬ್ಯಾಂಕ್/ಅಂಚೆ ಕಛೇರಿ | ನಾಲ್ಕು ದಿನಗಳು | ಹದಿನೈದನೇ ದಿನ | ಬ್ಯಾಂಕ್/ಹಣಕಾಸು ಸಂಸ್ಥೆ ನೀಡಿದ ಸ್ವೀಕೃತಿಗಳನ್ನು ಎನ್.ಐ.ಸಿ ತಂತ್ರಾಂಶದಲ್ಲಿ ಅಳವಡಿಸುವುದು |

1) ಮೇಲೆ ಪಟ್ಟಿ ಮಾಡಿರುವಂತೆ ಎನ್.ಐ.ಸಿ., ನವದೆಹಲಿ, ನರೇಗಾ ಸಾಫ್ಟ್/ತಂತ್ರಾಂಶಗಳ ವತಿಯಿಂದ ವಿಳಂಬದ ವಿವಿಧ ಹಂತದ ಕಾರ್ಯಾನುಷ್ಠಾನ ಜವಾಬ್ದಾರಿಗಳನ್ನು ಗುರುತಿಸುವುದು ಮತ್ತು ವಿಳಂಬದನ್ವಯ ಮರು ಪಾವತಿ ಮೊತ್ತವನ್ನು ಹಂಚಿಕೆ ಮಾಡುವುದು.

2) ಎಸ್.ಇ.ಜಿ.ಎಫ್/ರಾಜ್ಯದಲ್ಲಿ ಅನುದಾನದ ಕೊರತೆ/ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ವಿಳಂಬ ಪರಿಹಾರ ಪಾವತಿ ಪ್ರಕ್ರಿಯೆಯನ್ನು ನರೇಗಾ ಸಾಫ್ಟ್‌ನಲ್ಲಿ ನಿಷ್ಕ್ರಿಯವಾಗುವಂತಹ ವಿಧಾನದ ಸೂಕ್ತ ತಂತ್ರಾಂಶವನ್ನು ಎನ್.ಐ.ಸಿ., ನವದೆಹಲಿ ಇವರ ವತಿಯಿಂದ ರೂಪಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

ಸಹಿ/-
(ಮುನೀಶ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಮತ್ತು ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ರವರಿಗೆ,

1) ಮಹಾಲೇಖಪಾಲಕರು, ಬೆಂಗಳೂರು/ಧಾರವಾಡ.



Joint Director (Technical)
Rural Development Commissionerate
Rural Development & Panchayath Raj Department

2) ರಾಜ್ಯದ ಎಲ್ಲಾ ಜಿಲ್ಲಾಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು.
3) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕಾಧಿಕಾರಿಗಳು.
4) ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳು (ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕಾಧಿಕಾರಿಗಳ ಮೂಲಕ)

ಪ್ರತಿ ಮಾಹಿತಿಗಾಗಿ:

1) ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
7) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಗುಲ್ಬರ್ಗ/ಬೆಳಗಾವಿ ವಿಭಾಗಳು.
8) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
9) ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
10) ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು.
11) ಎಲ್ಲಾ ಜಿಲ್ಲೆಗಳ ಓಂಬಡ್ಸಮನ್‌ಗಳು.
12) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ(ಮಹಾತ್ಮಗಾಂಧಿ ನರೇಗಾ) ಎಲ್ಲಾ ಅಧಿಕಾರಿಗಳು.
13) ಶ್ರೀ ಶ್ರೀನಿವಾಸ ಮಾರಂಗಪ್ಪ ನವರು, ವಿಶೇಷ ಅಧಿಕಾರಿಗಳು, ಗಣಕ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಕಳುಹಿಸುತ್ತಾ, ಇಲಾಖಾ ವೈಬ್‌ಸೈಟ್‌ನಲ್ಲಿ ಆದೇಶವನ್ನು ಆರೋಹಿಸಲು ಕ್ರಮವಹಿಸಲು ಸೂಚಿಸಿದೆ.
14) ಶ್ರೀ ವೈ.ಮಹಾಂಕಾಳಪ್ಪ, ಸಾರ್ವಜನಿಕ ಸಂಪರ್ಕ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಕಳುಹಿಸುತ್ತಾ, ಮುಂದಿನ ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ಆದೇಶವನ್ನು ಪ್ರಕಟಿಸಲು ಕ್ರಮವಹಿಸಲು ಸೂಚಿಸಿದೆ.
15) M/s Effia Technologies, ರವರಿಗೆ ಕಳುಹಿಸುತ್ತಾ, www.end2endsolutions.com ನಲ್ಲಿ ಆದೇಶವನ್ನು ಆರೋಹಿಸಲು ಕ್ರಮವಹಿಸಲು ಸೂಚಿಸಿದೆ.
16) ~~ಕಛೇರಿ ಪ್ರತಿ.~~

**G.O.No. RDP 264 EGS 2013 Bangalore Dated: 06-02-2014**ರ ಕನ್ನಡ ಅನುವಾದವನ್ನು ದೃಢೀಕರಿಸಿದೆ.

Joint Director (Technical)
Rural Development Commissionerate
Rural Development & Panchayath Raj Department
Bangalore